ಈ ದಿನ ದಿನಾಂಕಃ 29-11-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಡಿ ಅರ್ ಜೆ ವಕೀಲರಿಂದಃ**

ನನ್ನ ಅಜ್ಜ ಚೆನ್ನಬಸಪ್ಪನವರು ದಾವಾಸ್ತಿಯನ್ನು ನಿಪಿ-4ರಂತೆ ಬೋಜಪ್ಪ ಮತ್ತು ಅವರ ಮಕ್ಕಳಾದ ಸಿದ್ದರಾಮಪ್ಪ, ರುದ್ರಪ್ಪ, ಹನುಮಂತಪ್ಪನವರಿಂದ ಖರೀದಿಸಿದ್ದರು ಎಂದರೆ ಸರಿ. ನಿಪಿ-4 ನ್ನು ಖರೀದಿಸುವ ಸಮಯಕ್ಕೆ ನನ್ನ ಅಜ್ಜನಿಗೆ ಪಿತ್ರಾರ್ಜಿತ ಸ್ವತ್ತುಗಳಿಂದ ಬರುವ ಯಾವುದೇ ಆದಾಯ ಇರಲಿಲ್ಲ ಎಂದರೆ ಸಾಕ್ಷಿ ತೋಟ ಇತ್ತು ಎಂದು ನುಡಿಯುತ್ತಾರೆ. ದಾವಾಸ್ತಿಯನ್ನು ನನ್ನ ಅಜ್ಜ ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದು , ಪಿತ್ರಾರ್ಜಿತ ಸ್ವತ್ತಿನಲ್ಲಿ ಬಂದ ಆದಾಯದಿಂದ ಖರೀದಿ ಮಾಡಿಲ್ಲ ಎಂದರೆ ಸಾಕ್ಷಿ 1986 ರಲ್ಲಿ ತೋಟ ಕಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನನ್ನ ಅಜ್ಜ ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾಸ್ತಿ ಪ್ರಸ್ತುತ ಗ್ರಾಮ ಠಾಣಾದ ವ್ಯಾಪ್ತಿಗೆ ಒಳಪಟ್ಟಿದ್ದು ಖಾತಾ ಸಂಖ್ಯೆ 89 ಎಂದು ಪಂಚಾಯತಿ ದಾಖಲಿಗಳಲ್ಲಿ ನಮೂದು ಇದ್ದು, ಪ್ರಸ್ತುತ 131 ಎಂದು ಚಾಲ್ತಿಯಲಿದ್ದು ಸರ್ವೆ ಜಮೀನಾಗಿ ಉಳಿದಿಲ್ಲ ಎಂದರೆ ಸರಿ. ಸದರಿ ಸಂಗತಿಯ ಕುರಿತು ನಾನು ನ್ಯಾಯಾಲಯಕ್ಕೆ ದಾವಾಸ್ತಿ ಪಂಚಾಯತಿ ವ್ಯಾಪಿತಗೆ ಒಳಪಟ್ಟ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ತಮ್ಮ ಪರವಾಗಿ ನಿಶಾನೆಗೊಳಗಾದ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿ ತಾನು ಹೇಳಿದಂತಹ ಪಂಚಾಯತಿ ದಾಖಲೆಗಳು ಇಲ್ಲದೆ ಇರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ.

ಹಾಗಾಗಿ ನಾನು ಹಾಜರಪಡಿಸಿರುವ ಸಶವೆ ನಂ 1/2ಬಿ ಯ ಅಸ್ತಿ ಸರ್ವೆ ನಂಬರಿನಲ್ಲಿ ಉಳಿದಿಲ್ಲ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ, ನಿಪಿ-4ರಂತೆ ನನ್ನ ಅಜ್ಜ ದಾವಾಸ್ತಿಯನ್ನು ಖರೀದಿಸುವ ಸಮಯಕ್ಕೆ ನನಗೆ 8 ವರ್ಷ ವಯಸ್ಸಾಗಿತ್ತು. ಹಾಗಾಗಿ ನನ್ನ ಅಜ್ಜ ದಾವಾಸ್ತಿಯನ್ನು ಯಾವ ಆದಾಯದ ಮೂಲದಿಂದ ಖರೀದಿಸಿದ್ದರು ಎಂದು ನನಗೆ

ಗೊತ್ತಿಲ್ಲ ಎಂದರೆ ಸರಿ. ಹಾಗಾಗಿ ನನ್ನ ಅಜ್ಜ ನಿಪಿ-4ರಂತೆ ಖರೀದಿಸಿದ ದಾವಾಸ್ತಿಯನ್ನು ಪ್ರತಿವಾದಿ ನಿಪಿ-3ರಂತೆ ಸದರಿಯವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ.

ದಾವಾಸ್ತಿ ಪಿತ್ರಾರ್ಜಿತ ಆಸ್ತಿ ಎನ್ನುವುದನ್ನು ತೋರಿಸಲು ನಾನು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ನಾನು ದಾವಾಸ್ತಿ ಪಿತ್ರಾರ್ಜಿತ ಎನ್ನುವುದನ್ನು ತೊರೀಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸಾಕ್ಷಿ ಕಾಲಾವಕಾಶ ಕೊಟ್ಟರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಹಾಗಾಗಿ ದಾವಾಸ್ತಿಯನ್ನು ನನ್ನ ಅಜ್ಜನಿಂದ ಪ್ರತಿವಾದಿ ನಿಪಿ-3 ರಂತೆ ಖರೀದಿ ಮಾಡಿರುವುದರಿಂದ ಸದರಿ ದಾವಾಸ್ತಿ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು ಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ 35 ಇಂಟು 60 ವಿಸ್ತೀರ್ಣದ ಅಸ್ತಿ ಪ್ರತಿವಾದಿಯ ಹೆಸರಿಗೆ ಹೋಗಿದ್ದು ಉಳಿದ ಆಸ್ತಿಯಲ್ಲಿ ನನಗೆ ಹಿಸ್ಸೆ ಇದೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಗೆ ತೊಂದರೆಕೊಡುವ ಉದ್ದೇಶದಿಂದ ಚೆನ್ನಬಸಪ್ಪನವರು ಖರೀದಿಸಿದ ಒಟ್ಟು ವಿಸ್ತೀರ್ಣದ ಆಸ್ತಿಗೆ ದಾವೆಯನ್ನು ಹೂಡಿ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.